Date :03-06-2016



# 2016–17 ಸೀಸನ್ ಖಾರಿಫ್ ಭತ್ತದ ಬೆಂಬಲ ಬೆಲೆ ರೂ.60 ಹೆಚ್ಚಳ

ದೇಶೀ ಉತ್ಪಾದನೆ ಹೆಚ್ಚಿಸಲು ಕೇಂದ್ರ ಸರಕಾರ ಬುಧವಾರ ಭತ್ತದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ.60 ಹೆಚ್ಚಳಗೊಳಿಸಿದೆ. ಕೇಂದ್ರದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆಯೆಂದು ಮೂಲಗಳು ತಿಳಿಸಿವೆ. ಇದರಂತೆ 2016–17 ಖಾರಿಫ್ ಬೆಳೆಯ ಭತ್ತ ಸಾಮಾನ್ಯ ದರ್ಜೆಗೆ ಕ್ವಿಂ. ಗೆ ರೂ.1410 ರಿಂದ 60 ರೂ. ಹೆಚ್ಚಳ ಗೊಳಿಸಿ 1470 ಕ್ಕೆ ಹೆಚ್ಚಳವಾಗಿದ್ದು, ಎ ಗ್ರೇಡ್ ಭತ್ತ ದರ ಕ್ವಿಂ.ಗೆ 1450 ರಿಂದ 60 ರೂ. ಹೆಚ್ಚಳವಾಗಿ ರೂ.1510 ಆಗಿದೆ.